## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

## ನಂಜನಗೂಡು

**ಸಿ.ಸಿ 1738/2018** **ಪಿ.** ಡಬ್ಲ್ಯೂಃ **2**

**ಸಿ. ಡಬ್ಲು 2**

| | |
|---|---|
| ಸಾಕ್ಷಿದಾರರ ಹೆಸರು ತಂದೆಯ /ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ಮಹದೇವು ಡಿ<br>ದೇವರಾಜೇಗೌಡ<br>36 ವರ್ಷ<br>ಚಾಲಕ ಮತ್ತು ನಿರ್ವಾಹಕ<br>ಕಂಚಿನಕೆರೆ ಗ್ರಾಮ ಕೆ ಆರ್ ನಗರ |
| | ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 24-02-2026 |

**ಮುಖ್ಯ ವಿಚಾರಣೆಃ ಶ್ರೀ ಎಪಿಪಿ ವಕೀಲರಿಂದಃ**

ದಿಃ 20-07-2018 ರಂದು ನಂಜನಗೂಡು ಪೋಲೀಸ್ ಠಾಣೆಗೆ ಎ ಪಿ ಎಂ ಸಿ ಒಳ ಆವರಣದಲ್ಲಿ ಅಮಾನತ್ತು ಜರುಗಿಸುವ ಸಂಬಂಧ ಪೋಲೀಸರು ಮಹಜರು ಕ್ರಮ ಜರುಗಿಸಿರುತ್ತಾರೆ. ಬಸ್ ನಂಬರ್ ಕೆಎ-10-ಎಫ್ - 4251 ಸ್ಕೂಟರ್ ಗೂ ನಮ್ಮ ಬಸ್ ಗೆ ಅಪಘಾತ ಆದ ಕಾರಣ ಈ ಮಹಜರನ್ನು ಬೆಳಗ್ಗೆ 9 ಗಂಟೆ ಯಿಂದ 12 ಗಂಟೆಯವರಗೆ ಮಹಜರು ಕ್ರಮ ಜರುಗಿಸಿರುತ್ತಾರೆ. ಚಾಸಾ-1 ಮತ್ತು 3 ರವರು ನನ್ನ ಜೊತೆಗೆ ಸಹಿ ಮಾಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು ಅದು ಅಮಾನತ್ತು ಮಹಜರಾಗಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಅಪಘಾತ ಸಂಬಂಧ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

(ಸಸಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

**<u>ಪಾಟೀ ಸವಾಲುಃ ಶ್ರೀ ಎಪಿಪಿ ಯವರಿಂದ</u>**

ದಿಃ 20-07-2018 ರಂದು ಕೆಎ-09-ಎಫ್ -4251 ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ ಆಗಿತ್ತು ಎಂದರೆ ಸರಿ. ಈ ಮಹಜರು ಕ್ರಮವನ್ನು 9 ಗಂಟೆಯಿಂದ 10 ಗಂಟೆಯವರಗೆ ಜರುಗಿಸಿದರು ಎಂದರೆ ಸರಿ. ದಿಃ 20-07-2018 ರಂದು ಪೋಲೀಸ್ ನಾನು ಪೋಲೀಸ್ ಠಾಣೆಗೆ ಹೋಗಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಸಿ ಎಸ್ ಎಂ ವಕೀಲರಿಂದ .</u>**

ನೀವು ಯಾವುದೇ ಮಹಜರನ್ನು ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರಿನಲ್ಲಿ ಏನು ನಮೂದು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ ಅದರಲ್ಲಿ ಇರುವ ವಿಷಯಗಳನ್ನು ಓದಿ ಹೇಳಿರುವುದಿಲ್ಲ. ಪಿರ್ಯಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

**2 ನೇ ಕಿ.**ಪ್ರ.ದ. ನ್ಯಾ. ದಂ. ನಂಜನಗೂಡು